೪) ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಸೀಗಡಿ ಮರಿ ಉತ್ಪಾದನಾ ಹ್ಯಾಚರಿ ನಿರ್ಮಾಣ, ಇತ್ಯಾದಿ.

ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು

೯೩. ಶ್ರೀ ಎಂ. ಮಹದೇವ (ನಂಜನಗೂಡು).—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಕೆ. ಎಚ್. ರಂಗನಾಥ್ (ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಯೋಜನೆಯಡಿಯಲ್ಲಿ ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ. ಯೋಜನೇತರ ಬಾಬ್ತಿನಲ್ಲಿ ಇರುವ ಖಾಲಿ ಹುದ್ದೆಗಳನ್ನು ರಾಜ್ಯದಲ್ಲಿ ಆರ್ಥಿಕ ಮಿತವ್ಯಯದ ಆದೇಶದಿಂದ ತುಂಬಲು ಸಾಧ್ಯವಾಗಿಲ್ಲ. ಆರ್ಥಿಕ ಮಿತವ್ಯಯ ಸಡಿಲಿಸಿದ ನಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ದಕ್ಷಿಣ ಕನ್ನಡದ ಶಿರೂರಿನಲ್ಲಿ ಮೀನುಗಾರಿಕಾ ಸೌಲಭ್ಯಗಳ ಕೊರತೆ

೯೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಮೀನುಗಾರಿಕಾ ಗ್ರಾಮವೆಂದು ಗುರುತಿಸಲ್ಪಟ್ಟು ಹಿಂದೆ ಲಕ್ಷಾಂತರ ರೂಪಾಯಿಗಳನ್ನು ವಿಶೇಷ ಸವಲತ್ತು ರಚಿಸಲು ವ್ಯಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಮಂಜುಗಡ್ಡೆ ಘಟಕ, ಜಟ್ಟಿ, ಮೀನು ಒಣಗಿಸುವ ಯಾರ್ಡುಗಳು ಬಂದರು ಅಪೂರ್ಣ ಸ್ಥಿತಿಯಲ್ಲಿರಲು ಕಾರಣಗಳೇನು ?

ಇ) 'ಬ್ರೇಕ್ ವಾಟರ್' ತಡೆ ನಿರ್ಮಿಸಿ, ಯಾಂತ್ರಿಕ ದೋಣಿಗಳು ದಡಕ್ಕೆ ಬರಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಕರಾವಳಿಯ ಮೀನುಗಾರರ ಗ್ರಾಮಗಳ ಪೂರಕ ಅಭಿವೃದ್ಧಿ ಯೋಜನೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಸರಕಾರ ಹಮ್ಮಿಕೊಂಡಿದೆ.

ಆ) ಈ ಯೋಜನೆಯಡಿಯಲ್ಲಿ ಒಂದು ಮಂಜುಗಡ್ಡೆ ಘಟಕವನ್ನು ನಿರ್ಮಿಸಿದ್ದು, ಮಂಜುಗಡ್ಡೆ ಉತ್ಪಾದನೆ ಆರಂಭ ಮಾಡಲಾಗಿತ್ತು. ಆದರೆ ಸದ್ರಿ ಮಂಜುಗಡ್ಡೆ ಘಟಕದ ಯಂತ್ರಗಳ (ಕೂಲಿಂಗ್ ಕಾಯಿಲ್‌ಗಳ) ತೊಂದರೆಯಿಂದಾಗಿ ಮಂಜುಗಡ್ಡೆ ಉತ್ಪಾದನೆಗೆ ಅಡಚಣೆ ಉಂಟಾಗಿರುತ್ತದೆ. ಶಿರೂರಿನಲ್ಲಿ ನಿರ್ಮಿಸಲಾದ ಜಟ್ಟಿಯು ಮತ್ತು ಬಂದರು ನಿರ್ಮಿಸುವ ಕಾರ್ಯಕ್ರಮವು ಮೇಲಿನ ಯೋಜನೆಯಲ್ಲಿ ಸೇರಿರುವುದಿಲ್ಲ. ಈ ಯೋಜನೆಯಡಿಯಲ್ಲಿ ಮೀನು ಒಣಗಿಸುವ ಯಾರ್ಡುಗಳನ್ನು ರಚಿಸಲು ಅಗತ್ಯವಿದ್ದ ಭೂಮಿಯನ್ನು ವಶಪಡಿಸಿಕೊಳ್ಳಲು (ಭೂಮಿ ತಕರಾರಿನಿಂದ) ಅಡಚಣೆ ಉಂಟಾಗಿ ಸದ್ರಿ ಯಾರ್ಡನ್ನು ನಿರ್ಮಿಸಲು ವಿಳಂಬವಾಗಿದೆ.

ಇ) ''ಬ್ರೇಕ್ ವಾಟರ್'' ತಡೆ ನಿರ್ಮಿಸುವ ಬಗ್ಗೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಕೋಸ್ಟಲ್ ಇಂಜಿನಿಯರಿಂಗ್ ಫಾರ್ ಫಿಶರೀಸ್, ಬೆಂಗಳೂರು ಇವರಿಂದ ತಾಂತ್ರಿಕ ವರದಿ ಕೇಳಿದ್ದು, ಅವರಿಂದ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.